## ಕರ್ನಾಟಕ ವಿಧಾನ ಪರಿಷತ್ತು

| | | | |
|---|---|---|---|
| 1 | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1225 |
| 2 | ಸದಸ್ಯರ ಹೆಸರು | : | ಶ್ರೀ ಕೆ.ಎಸ್. ನವೀನ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| 3 | ಉತ್ತರಿಸುವ ದಿನಾಂಕ | : | 19-12-2024 |
| 4 | ಉತ್ತರಿಸುವವರು | : | ಉಪ ಮುಖ್ಯಮಂತ್ರಿಗಳು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಬೆಂಗಳೂರು ನಗರ ವ್ಯಾಪ್ತಿಗೆ ಬರುವ ರಾಷ್ಟ್ರೀಯ ಹೆದ್ದಾರಿ, ರಾಜ್ಯ ಹೆದ್ದಾರಿ, ಜಿಲ್ಲಾ ಹೆದ್ದಾರಿ ಹಾಗೂ ಬಿಬಿಎಂಪಿ ವ್ಯಾಪ್ತಿಗೆ ಬರುವ ರಸ್ತೆಗಳಾವುವು; (ಪೂರ್ಣ ವಿವರ ಒದಗಿಸುವುದು). | • ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬರುವ ರಾಷ್ಟ್ರೀಯ ಹೆದ್ದಾರಿ ವಿವರ **ಅನುಬಂಧ-1** ರಲ್ಲಿ ಒದಗಿಸಿದೆ. ಸದರಿ ರಸ್ತೆಗಳನ್ನು ಹೈಡೆನ್ಸಿಟಿ ಕಾರಿಡಾರ್‌ಗಳಾಗಿ ಪರಿಗಣಿಸಲಾಗಿರುತ್ತದೆ. ಇದರ ಉದ್ದ ಸುಮಾರು 77.64 ಕಿ.ಮೀ ಗಳಾಗಿರುತ್ತದೆ.<br>• ಉಳಿದಂತೆ ಹಿಂದಿನ ರಾಜ್ಯ ಹೆದ್ದಾರಿ, ಜಿಲ್ಲಾ ಹೆದ್ದಾರಿಗಳು ಮಾರ್ಪಟು ಆಗಿದ್ದು, ಸದರಿ ರಸ್ತೆಗಳನ್ನು ಪ್ರಸ್ತುತ ಆರ್ಟಿರಿಯಲ್ ಮತ್ತು ಸಬ್ ಆರ್ಟಿರಿಯಲ್ ರಸ್ತೆ ಎಂದು ನಾಮಕರಣ ಮಾಡಲಾಗಿರುತ್ತದೆ. ಇದರ ಉದ್ದ ಸುಮಾರು 1,604.46 ಕಿ.ಮೀ ಗಳಾಗಿರುತ್ತದೆ.<br>• ಉಳಿದಂತೆ ಬಿಬಿಎಂಪಿ ವ್ಯಾಪ್ತಿಯಲ್ಲಿ ವಾರ್ಡ್ ರಸ್ತೆಗಳಿದ್ದು, ಇದರ ಉದ್ದ ಸುಮಾರು 11,196.79 ಕಿ.ಮೀ ಗಳಾಗಿರುತ್ತದೆ. |
| ಆ) | ಸದರಿ ರಸ್ತೆಗಳು ಹಾಳಾಗಿದ್ದು ಇಲ್ಲಿಯವರೆಗೂ ಎಷ್ಟು ರಸ್ತೆಗಳನ್ನು ದುರಸ್ಥಿ ಪಡಿಸಲಾಗಿದೆ; (ವಿವರ ಒದಗಿಸುವುದು) | • ಬೆಂಗಳೂರು ನಗರದ ರಸ್ತೆಗಳ ತಳಭಾಗವನ್ನು ನೀರಿನ ಕೊಳವೆ, ಒಳಚರಂಡಿ ಕೊಳವೆ, ಓಎಫ್‌ಸಿ ಕೊಳವೆ, ಗೇಲ್‌ಗ್ಯಾಸ್‌ಗಳಿಗಾಗಿ ಉಪಯೋಗಿಸಿಕೊಳ್ಳುತ್ತಿದ್ದು, ಈ ಉಪಲಬ್ಧಗಳಿಂದ ರಸ್ತೆಗಳು ಮಳೆ ಸಂದರ್ಭದಲ್ಲಿ ಹಾಳಾಗುತ್ತಿದ್ದು, ಈ ರಸ್ತೆಗಳ ಶಾಶ್ವತ ದುರಸ್ಥಿಗಾಗಿ ಸುಮಾರು 196 ಕಿ.ಮೀ ನಷ್ಟು ವೈಟ್ ಟಾಪಿಂಗ್, ಸುಮಾರು 58.00 ಕಿಮೀನಷ್ಟು ಟೆಂಡರ್‌ಶ್ಯೂರ್ ಮತ್ತು ಸ್ಮಾರ್ಟ್ ರಸ್ತೆಗಳನ್ನಾಗಿ ಅಭಿವೃದ್ಧಿಪಡಿಸಲಾಗುತ್ತಿರುತ್ತದೆ, ಈ ರಸ್ತೆಗಳು ಶಾಶ್ವತವಾಗಿ ಉತ್ತಮ ದರ್ಜೆಯ ರಸ್ತೆಗಳಾಗಿರುತ್ತದೆ.<br>• ಸುಮಾರು 12,624.89 ಕಿ.ಮೀ ರಸ್ತೆಗಳನ್ನು ಅಗತ್ಯತೆ ಮತ್ತು ಅನುದಾನದ ಲಭ್ಯತೆಗೆ ಅನುಗುಣವಾಗಿ ನಿರ್ವಹಣೆಯನ್ನು ಮಾಡಲಾಗುತ್ತಿರುತ್ತದೆ. |
| ಇ) | ಇಲ್ಲಿಯವರೆಗೂ ದುರಸ್ಥಿ ಕಾರ್ಯ ಕೈಗೊಳ್ಳದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಸದರಿ ರಸ್ತೆಗಳ ದುರಸ್ಥಿಗೆ ಸರ್ಕಾರ ಕೈಗೊಂಡ ಕ್ರಮಗಳೇನು; | • ರಸ್ತೆ ಅಗೆತದಿಂದ ಆಗುವ ರಸ್ತೆ ಗುಂಡಿಗಳನ್ನು ಆಯಾ ಸಂಸ್ಥೆಗಳೇ ಅಂದರೆ ಬೆಸ್ಕಾಂ, ಕೆ.ಪಿ.ಟಿ.ಸಿ.ಎಲ್, ಗೇಲ್‌ಗ್ಯಾಸ್ ರವರುಗಳೇ ಮುಚ್ಚುವಂತೆ ಆದೇಶ ನೀಡಲಾಗಿದ್ದು, ರಸ್ತೆ ಗುಂಡಿಗಳಿಗೆ ಕಡಿವಾಣ ಹಾಕಲಾಗಿರುತ್ತದೆ. |
| ಈ) | 01-06-2023 ರಿಂದ ಇಲ್ಲಿಯವರೆಗೆ ಬೆಂಗಳೂರು ನಗರ ವ್ಯಾಪ್ತಿಗೆ ಬರುವ ರಸ್ತೆಗಳ ಅಭಿವೃದ್ದಿಗೆ ಎಷ್ಟು ಅನುದಾನ ಮೀಸಲಿಡಲಾಗಿದೆ; ಈವರೆಗೆ ಎಷ್ಟು ಅನುದಾನ ಬಿಡುಗಡೆ ಮಾಡಲಾಗಿದೆ? (ಸಂಪೂರ್ಣ ವಿವರ ಒದಗಿಸುವುದು). | • ಅಂತರ್ ಇಲಾಖೆಗಳೊಂದಿಗೆ ಸಮನ್ವಯ ಸಾಧಿಸಲಾಗಿದ್ದು, ರಸ್ತೆ ಅಗೆಯುವ/ರಸ್ತೆ ದುರಸ್ಥಿಗೊಳಿಸುವ ಪ್ರಕ್ರಿಯೆಯನ್ನು ಕ್ರಮಬದ್ಧ ಗೊಳಿಸಲಾಗಿರುತ್ತದೆ. |

. . . 2 .

| | | |
|---|---|---|
| | | • ರಸ್ತೆ ಅಗೆತವನ್ನು ತಡೆಗಟ್ಟಲು ಪ್ರಮುಖ ರಸ್ತೆಗಳಲ್ಲಿ ರಸ್ತೆ ಅಭಿವೃದ್ಧಿಯ ಜೊತೆಗೆ ಡಕ್ಟ್‌ಗಳ ನಿರ್ಮಾಣವನ್ನು ಕೈಗೊಂಡಿರುವ ಹಿನ್ನಲೆಯಲ್ಲಿ ರಸ್ತೆ ಗುಂಡಿಗಳ ಉದ್ಭವಿಕೆಗೆ ಕಡಿವಾಣ ಹಾಕಲಾಗಿರುತ್ತದೆ.<br>• ರಸ್ತೆ ಗುಂಡಿಗಳನ್ನು ಪಾರದರ್ಶಕವಾಗಿ ಗುರುತಿಸಲು ಮತ್ತು ದುರಸ್ಥಿ ಪಡಿಸಲು ಹಾಗೂ ನಿಗಧಿತ ಅವಧಿಯಲ್ಲಿ ರಸ್ತೆ ಗುಂಡಿ ಮುಚ್ಚಲಾದ ಕಾರ್ಯವಿಧಾನದ ಬಗ್ಗೆ ನಿಗಾ ವಹಿಸಲು "ರಸ್ತೆ ಗುಂಡಿ ಗಮನ" ಎಂಬ ಮೊಬೈಲ್ ಆಪ್‌ಅನ್ನು ಅಭಿವೃದ್ಧಿಗೊಳಿಸಲಾಗಿದೆ.<br>• 2023-24ನೇ ಸಾಲಿನಲ್ಲಿ ಪ್ರಮುಖ ರಸ್ತೆಗಳ ಮಳೆ ಚರಂಡಿಗಳ ಅಭಿವೃದ್ಧಿ ಮತ್ತು ನಿರ್ವಹಣೆಗಾಗಿ ರೂ.40.00 ಕೋಟಿಗಳನ್ನು ಬಿಡುಗಡೆ ಮಾಡಲಾಗಿರುತ್ತದೆ.<br>• ವಾರ್ಡ್ ಮಟ್ಟದ ರಸ್ತೆಗಳ ಮತ್ತು ಮಳೆ ಚರಂಡಿಗಳ ಅಭಿವೃದ್ಧಿ ಮತ್ತು ನಿರ್ವಹಣೆಗಾಗಿ ಮತ್ತು ಇತರೆ ಅಭಿವೃದ್ಧಿ ಕಾಮಗಾರಿಗಳಿಗೆ ಅಂದಾಜು ರೂ.1116.15 ಕೋಟಿಗಳನ್ನು ಒದಗಿಸಲಾಗಿದೆ.<br>• ರಸ್ತೆ ಅಭಿವೃದ್ಧಿಗಾಗಿ ವೈಟ್‌ಟಾಪಿಂಗ್ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದ್ದು, ಈ ಯೋಜನೆಯಲ್ಲಿ ರಸ್ತೆ ಹಾಗೂ ರಸ್ತೆ ಬದಿಯ ಚರಂಡಿಗಳನ್ನು ಅಭಿವೃದ್ಧಿ ಪಡಿಸುವ ಕಾಮಗಾರಿಗಳು ಸೇರಿದ್ದು, ಸದರಿ ಯೋಜನಾ ವೆಚ್ಚ ರೂ.2000.00 ಕೋಟಿಗಳಾಗಿರುತ್ತದೆ. |

**ನಅಇ 630 ಎಂಎನ್‌ವೈ 2024**

**(ಡಿ.ಕೆ. ಶಿವಕುಮಾರ್)**
ಉಪ ಮುಖ್ಯಮಂತ್ರಿ

## ANNEXURE – 1

| Sl No | NH number, Origin and Destination | Chainage with in the city limits | Section of the alignment of NH with in the city | Length in Kms |
|---|---|---|---|---|
| 1 | 209, From Dindigal to Bengaluru road | 478 to 461.55 | Bengaluru GPO – Corporation circle – KR Market – VV Puram circle – Vani Vilas park road – old kanakapura road – yediyur – Banashankari – Sarakki circle – Metri Cast & Carry – Yellamma Dassappa – Thalghattapura – Nice road junction | 16.45 |
| 2 | 275, From Bantawala to Bangalore section | 342 to 359.937 | Nice junction at Kengeri – RV Engineering college – Nayanadanahalli – Haleguddadahalli – K.R.Market – Townhall – Corporation – NT Road – KR circle – GPO | 17.937 |
| 3 | 4, Bangalore to Pune Section | 0.00 to 9.80 | GPO – Rajbhavan road – Bsva bhavn road – BDA road – Sanky road – BHEL circle – Yeshwanthapura police station – APMC yard – Goraguntepalya | 9.80 |
| | Madras Kolar to Bangalore Section | 318.00 to 302.20 | GPO – MG Road – Ulsoor Lake – Indranagar – Old ITI – KR Pura + KRPuram lake – Battarahalli | 15.80 |
| 4 | 7, Hyderabad to Bengaluru section | 556.84 to 547.84 | GPO – Rajbhavan road – Bsva bhavn road – BDA road – Sanky road – Mekhri circle – Hebbal Flyover | 9.00 |
| | Bangalore to Kanyakumari | 556.84 to 565.49 | GPO – MG Road – Shoolay circle – Old Adugodi road – Central silk board | 8.65 |
| | | | **Total Length** | **77.64** |
| | | | **Rounded Off** | |